

ಕರ್ನಾಟಕ ಸರ್ಕಾರ



## ಆರೋಗ್ಯ ಇಲಾಖೆ ಪ್ರಕಟಣೆ

# ಕ್ಯಾಸನೂರು ಕಾಡಿನ ಕಾಯಿಲೆ ಅಥವಾ ಮಂಗನ ಕಾಯಿಲೆಯ ಬಗ್ಗೆ ಮಾಹಿತಿ

1956ರಲ್ಲಿ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕ್ಯಾಸನೂರು ಕಾಡಿನಲ್ಲಿ ಈ ಕಾಯಿಲೆ ಪತ್ತೆಯಾದ್ದರಿಂದ ಈ ರೋಗಕ್ಕೆ ಕ್ಯಾಸನೂರು ಕಾಡಿನ ಕಾಯಿಲೆ ಎಂದು ಕರೆಯಲಾಯಿತು. ಮಂಗನ ಕಾಯಿಲೆಗೆ ಕಾರಣ ಫ್ಲಾವಿ ಜಾತಿಗೆ ಸೇರಿದ ವೈರಾಣು.

ಈ ಕಾಯಿಲೆಯು ಕಾಡಿನಲ್ಲಿರುವ ಸೋಂಕಿತ ಉಣ್ಣೆಗಳು ಕಚ್ಚುವುದರಿಂದ ಮಾತ್ರ ಬರುತ್ತದೆ. ಈ ಕಾಯಿಲೆಯು ಮನುಷ್ಯರಿಂದ ಮನುಷ್ಯರಿಗೆ ಹರಡುವುದಿಲ್ಲ. ಕಾಡಿನಲ್ಲಿ ಮಂಗಗಳು ಸಾಯುವುದೇ ಈ ಕಾಯಿಲೆಯ ಮುನ್ಸೂಚನೆ.

**ರೋಗದ ಮುಖ್ಯ ಲಕ್ಷಣಗಳು :**

1. ಐದರಿಂದ ಏಳು ದಿನಗಳವರೆಗೆ ಬಿಡದೇ ಬರುವ ಜ್ವರ
2. ತಲೆನೋವು, ಮೈಕೈ ನೋವು, ಕೀಲು ನೋವು, ನಿಶ್ಯಕ್ತಿ, ವಾಂತಿ ಭೇದಿ ಹೊಟ್ಟೆ ನೋವು, ಕಣ್ಣು ಕೆಂಪಾಗುವುದು.
3. ಜ್ವರ ಬಂದ ಕೆಲವು ದಿನಗಳ ನಂತರ ಮೂಗು, ವಸಡು, ಬಾಯಿ, ಗುದದ್ವಾರದಲ್ಲಿ ರಕ್ತಸ್ರಾವವಾಗಬಹುದು.
4. ಸನ್ನಿವಾತ/ಮೆದುಳಿನ ಹೊದಿಕೆಯ ಜ್ವರ ಲಕ್ಷಣಗಳು
5. ರೋಗದ ತೀವ್ರತೆಯು ರೋಗಿಯ ಪ್ರತಿರೋಧಕ ಶಕ್ತಿಯ ಮೇಲೆ ಅವಲಂಬಿತವಾಗಿರುತ್ತದೆ.
6. ಮದ್ಯವ್ಯಸನಿಗಳು ಹಾಗೂ ಅನಿಯಂತ್ರಿತ ಮಧುಮೇಹಿಗಳು ಹೆಚ್ಚು ಜಾಗರೂಕತೆ ವಹಿಸುವ ಅವಶ್ಯಕತೆ ಇರುತ್ತದೆ.



**ಮುಂಜಾಗ್ರತಾ ಕ್ರಮ :**

1. ಈ ಕಾಯಿಲೆಯ ಲಕ್ಷಣಗಳು: ಮಂಗ ಸಾಯುತ್ತಿರುವ ಕಾಡಿನಲ್ಲಿ ಜಾನುವಾರುಗಳು ಹಾಗೂ ಮನುಷ್ಯರ ಸಂಚಾರವನ್ನು ಕನಿಷ್ಟ ಒಂದು ತಿಂಗಳು ನಿರ್ಬಂದಿಸುವುದು.
2. ಕಾಡಿನಲ್ಲಿ ಸಂಚರಿಸುವಾಗ ಮೈತುಂಬಾ ಬಟ್ಟೆ ಧರಿಸಿ ಆರೋಗ್ಯ ಇಲಾಖೆಯಿಂದ ಉಚಿತವಾಗಿ ವಿತರಿಸುವ ಉಣ್ಣೆ ವಿಕರ್ಷಕ ತೈಲಗಳನ್ನು ಅಥವಾ ಇತರೇ ಸಾಂಪ್ರದಾಯಿಕ ತೈಲಗಳು (ಬೇವಿನ ತೈಲ, ನೀಲಗಿರಿ ತೈಲ) ಕೈಕಾಲುಗಳಿಗೆ ಲೇಪಿಸಿಕೊಂಡು ಹೋಗಬೇಕು. ಈ ತೈಲಗಳ ಪ್ರಭಾವ 3–4 ಗಂಟೆ ಮಾತ್ರ ಇರುವುದರಿಂದ ಒಂದು ದಿನದಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ತೈಲವನ್ನು ಬಳಸುವ ಅವಶ್ಯಕತೆ ಬರಬಹುದು.
3. ಕಾಡಿನಿಂದ ಬಂದ ನಂತರ ಬಿಸಿ ನೀರಿನಿಂದ ಸೋಪು ಹಚ್ಚಿ ಸ್ನಾನ ಮಾಡಬೇಕು ಬಟ್ಟೆಗಳನ್ನು ಬಿಸಿ ನೀರಿನಿಂದ ಸೋಪು ಹಚ್ಚಿ ತೊಳೆಯಬೇಕು.
4. ವಾಸ ಸ್ಥಳದ ಸುತ್ತಮುತ್ತ /ಊರಿನಲ್ಲಿ ಮಂಗ ಸತ್ತಿರುವುದು ಕಂಡುಬಂದಲ್ಲಿ ಸ್ಥಳೀಯ ಆರೋಗ್ಯ ಇಲಾಖೆ, ಅರಣ್ಯ ಇಲಾಖೆ ಹಾಗೂ ಗ್ರಾಮ ಪಂಚಾಯತ್‌ಗೆ ತಕ್ಷಣ ತಿಳಿಸುವುದು.
5. ಜಾನುವಾರುಗಳ ಮೈಮೇಲೆ ಉಣ್ಣೆಗಳು ಇರದಂತರೆ ಪಶು ಸಂಗೋಪನಾ ಇಲಾಖೆಯ ಸಹಾಯದಿಂದ ಕ್ರಮ ವಹಿಸುವುದು.
6. ಚುಚ್ಚುಮದ್ದು
   - ಅ. ಈ ಕಾಯಿಲೆ ತಡೆಯಲು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಲಸಿಕೆ ಲಭ್ಯವಿರುತ್ತದೆ.
   - ಆ. ಈ ಸಲಿಕೆಯಿಂದ ಯಾವುದೇ ತೀವ್ರತರವಾದ ದುಷ್ಪರಿಣಾಮ ಇರುವುದಿಲ್ಲ
   - ಇ. ಈ ಲಸಿಕೆಯನ್ನು ಆರೋಗ್ಯವಂತನಾದ ವ್ಯಕ್ತಿ ಸರಿಯಾದ ಪ್ರಮಾಣದಲ್ಲಿ ಒಂದು ತಿಂಗಳ ಅಂತರದಲ್ಲಿ 2 ವರಸೆ ಲಸಿಕೆ ಪಡೆಯುವುದು. 2ನೇ ಚುಚ್ಚು ಮದ್ದು ಹಾಕಿಸಿಕೊಂಡ 30 ದಿನಗಳ ನಂತರವೇ ನಿರೋಧಕ ಶಕ್ತಿ ಬರುತ್ತದೆ.
     1. ಪ್ರತಿ ವರ್ಷ ಬಲ ವರ್ಧಕ (Booster) ಲಸಿಕೆಯನ್ನು ಹಾಕಿಸಿಕೊಳ್ಳಬೇಕು.
     2. ಗರ್ಭಿಣಿ ಸ್ತ್ರೀಯರು ಈ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬಾರದು.

**ಗಮನಿಸಬೇಕಾದ ಮುಖ್ಯ ಅಂಶಗಳು :**

1. ಈ ಕಾಯಿಲೆಯನ್ನು ಗುಣ ಪಡಿಸಲು ಯಾವುದೇ ನಿರ್ದಿಷ್ಟವಾದ ಔಷಧಿ ಇರುವುದಿಲ್ಲ.
2. ಕಾಯಿಲೆಯು ಬರದಂತೆ ತಡೆಯುವ ಮುಂಜಾಗ್ರತಾ ಕ್ರಮಗಳೇ ಸಾವು ನೋವುಗಳನ್ನು ತಡೆಯುವ ಪ್ರಮುಖ ವಿಧಾನವಾಗಿದೆ.


ಉಪನಿರ್ದೇಶಕರು
ಪರಿಮಾಣು ಕ್ರಿಮಿ ಪರಿಶೋಧನ
ಪ್ರಯೋಗಾಲಯ, ಶಿವಮೊಗ್ಗ
**ದೂರವಾಣಿ : 08182–222050**